# ಸ್ನೇಹ ಚಿಂತನೆ

## ಮಾಸ ಪತ್ರಿಕೆ

info@buntsanghablr.com
buntsanghabangalore@yahoo.in

ಜನವರಿ 2025
ಸಂಪುಟ 21 ಸಂಚಿಕೆ 1

ಸಂಚಿಕೆ ಬೆಲೆ ರೂ. 1/-



2025ರ ಸಂಭ್ರಮದೊಂದಿಗೆ ಶ್ರೀ ವರಸಿದ್ಧಿ ವಿನಾಯಕನ ರಜತ ಮಹೋತ್ಸವ – ಜನವರಿ 19



ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾಕೂಟ – ಥ್ರೋಬಾಲ್ ಪಂದ್ಯಾವಳಿ





ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ –I ಮತ್ತು II ರ ಶಾಲಾ ವಾರ್ಷಿಕೋತ್ಸವ





ಯುವ ವಿಭಾಗದ ವತಿಯಿಂದ ಹೊಸ ವರ್ಷಾಚರಣೆ

**ಬಂಟರ ಯಾನೆ ನಾಡವರು;**
**ಪ್ರಾದೇಶಿಕ ದೃಷ್ಟಿಕೋನ**

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

# 324, Bunts' Sangha Complex, Chord Road,
Vijayanagar, Bengaluru - 560040. Karnataka.
Phone : 080-23399323 | 23399636
Email : info@buntsanghablr.com

ಬಂಟರ ಸಂಘ ಬೆಂಗಳೂರು
BUNTS' SANGHA BANGALORE
ಪ್ರಾರ್ಥನಾ ಮಂದಿರ ಸಮಿತಿ



# ರಜತ ಮಹೋತ್ಸವ

**19 ಜನವರಿ 2025, ಭಾನುವಾರ**
**ಸ್ಥಳ : ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ**

ಬಂಟರ ಸಂಘ "ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ"ದ ರಜತ ಮಹೋತ್ಸವದ ವಿಶೇಷ ಸೇವಾ ಪೂಜೆಗಳಲ್ಲಿ ಭಾಗವಹಿಸಲು ನಿಮ್ಮನ್ನು ಹೃತ್ಪೂರ್ವಕವಾಗಿ ಆಹ್ವಾನಿಸುತ್ತಿದ್ದೇವೆ.

| | |
|---|---|
| ಸರ್ವ ಸೇವೆ | ₹1008 |
| ಪಂಚಾಮೃತ ಅಭಿಷೇಕ | ₹252 |
| ಸಹಸ್ರ ಮೋದಕ ಗಣಹೋಮ | ₹252 |
| ಮೂಡುಗಣಪತಿ ಸೇವೆ | ₹252 |
| ಅನ್ನ ಪ್ರಸಾದ ಸೇವೆ | ಇಚ್ಛಾನುಸಾರ |

ಸುಮಾರು 25 ವರ್ಷಗಳ ನಂತರ ಲಭಿಸಿರುವ ಈ ಶುಭ ಘಳಿಗೆಯಲ್ಲಿ ನಿಮ್ಮ ಮತ್ತು ನಿಮ್ಮ ಪ್ರೀತಿಯ ಕುಟುಂಬದ ಸದಸ್ಯರ ಹೆಸರಿನಲ್ಲಿ ಈ ವಿಶೇಷ ಪೂಜೆಗಳನ್ನು ನೋಂದಾಯಿಸಿಕೊಂಡು, ಪೂಜೆ ಸಲ್ಲಿಸುವ ಮೂಲಕ ಸಂಕಷ್ಟ ನಿವಾರಕನಾದ ಗಣೇಶನ ದಿವ್ಯ ಅನುಗ್ರಹಕ್ಕೆ ಪಾತ್ರರಾಗುವ ಅವಕಾಶವನ್ನು ಪಡೆಯಿರಿ.

**ಸೇವೆ ಮಾಡಲಿಚ್ಛಿಸುವವರು ಈ ಕೆಳಗೆ ನಮೂದಿಸಿದ ಬ್ಯಾಂಕ್ ಖಾತೆಗೆ ಹಣವನ್ನು ವರ್ಗಾಹಿಸಿ ತಮ್ಮ ಸೇವೆಯನ್ನು ನೀಡಬೇಕಾಗಿ ವಿನಂತಿ.**

**SREE VARASIDDI VINAYAKA MANDIRA**
UPI : **bunts70221@barodampay**

Bank Transfer :
Account Number: **89450100010270**
IFSC Code: **BARBOVJVIJB**
Branch: **Hosahalli Vijayanagar**

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ :
ಶೋಭಾ ಶೇಖ, ಚೇರ್ ಪರ್ಸನ್, ಪ್ರಾರ್ಥನಾ ಮಂದಿರ ಸಮಿತಿ, ಮೊ: 9901885998

**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಗೌರವ ಕಾರ್ಯದರ್ಶಿ

**ಪ್ರಸಾದ್ ಕುಮಾರ್ ಶೆಟ್ಟಿ**
ಸಂಚಾಲಕರು, ಪ್ರಾರ್ಥನಾ ಮಂದಿರ ಸಮಿತಿ

**ಸಿಎ. ಅಶೋಕ್ ಶೆಟ್ಟಿ ಎಂ.**
ಅಧ್ಯಕ್ಷರು

**ಶೋಭಾ ಶೇಖ**
ಚೇರ್ ಪರ್ಸನ್, ಪ್ರಾರ್ಥನಾ ಮಂದಿರ ಸಮಿತಿ

ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಪ್ರಾರ್ಥನಾ ಮಂದಿರ ಸಮಿತಿ ಸದಸ್ಯರು

# ಸ್ನೇಹ ಚಿಂತನೆ

*Monthly Magazine Published by*

## BUNTS' SANGHA BANGALORE

VOL 21 JANUARY - 2025 ISSUE 1

**ಸಾಹಿತ್ಯ ಪ್ರಕಾಶನ ಸಮಿತಿ**
ಚೇರ್‌ಪರ್ಸನ್ ಮತ್ತು ಗೌರವ ಸಂಪಾದಕರು:
ಶ್ರೀ ರವೀಂದ್ರ ಶೆಟ್ಟಿ ಹಟ್ಟಿಯಂಗಡಿ

**ಸಹ ಸಂಪಾದಕರು:**
ಶ್ರೀ ದೀಪಕ್ ಜೆ. ಶೆಟ್ಟಿ

**ಗೌರವ ಸಲಹೆಗಾರರು:**
ಶ್ರೀ ಎಂ. ಮುರಲೀಧರ ಹೆಗ್ಡೆ
ಶ್ರೀ ಬಾಲಕೃಷ್ಣ ಶೆಟ್ಟಿ (ಎಬಿ ಶೆಟ್ಟಿ)
ಡಾ. ದೀಪಕ್ ಶೆಟ್ಟಿ

**ಸಂಪಾದಕೀಯ ಮಂಡಳಿ**
ಶ್ರೀಮತಿ ನಿರ್ಮಲ ಸಿ. ರೈ
ಶ್ರೀ ಪ್ರಸಾದ್ ಶೆಟ್ಟಿ ಸೀತಾನದಿ
ಶ್ರೀಮತಿ ಸ್ಮಿತಾ ಬಲ್ಲಾಳ್
ಶ್ರೀ ಸತೀಶ್ ಶೆಟ್ಟಿ ವಕ್ವಾಡಿ
ಶ್ರೀ ಸಂದೀಪ್ ಹೆಗ್ಗದ್ದೆ
ಶ್ರೀಮತಿ ಶ್ಯಾಮಲ ಶೆಟ್ಟಿ

**ಪತ್ರಿಕಾ ಸಲಹಾ ವಿಭಾಗ:**
ಸಮಾಜ ಸೇವೆ ವಿಭಾಗ: ಶ್ರೀ ಜಯರಾಮ ಶೆಟ್ಟಿ ನೂಜಾಡಿ
ಕಾನೂನು ಸಲಹೆಗಾರರು: ಶ್ರೀಮತಿ ಸುಪ್ರೀತಾ ಕೆ. ಶೆಟ್ಟಿ
ಆರೋಗ್ಯ ಮಾಹಿತಿ ವಿಭಾಗ: ಡಾ. ಶಾಲ್ಮಲೀ ಸುರೇಶ್
ಮನೋರಂಜನಾ ವಿಭಾಗ: ಶ್ರೀಮತಿ ರೇವತಿ ಶೆಟ್ಟಿ
ಶೈಕ್ಷಣಿಕ ವಿಭಾಗ: ಶ್ರೀಮತಿ ನಂದಿನಿ ನಾಗರಾಜ್ ಶೆಟ್ಟಿ
ಕ್ರೀಡಾ ವಿಭಾಗ: ಶ್ರೀ ನವೀನ್ ಶೆಟ್ಟಿ

**ಪೋಷಕ ಸದಸ್ಯರು:**
ಶ್ರೀಮತಿ ಮನೋರಮ ಚೌಟ
ಶ್ರೀಮತಿ ವೇದ ಎಸ್. ಶೆಟ್ಟಿ
ಶ್ರೀ ಬಿ. ಕುಸುಮಾಕರ ಶೆಟ್ಟಿ
ಶ್ರೀ ಆರ್.ಎಸ್. ಶೆಟ್ಟಿ
ಶ್ರೀಮತಿ ವಸಂತಿ ಪಿ. ಶೆಟ್ಟಿ
ಶ್ರೀ ಪ್ರಕಾಶ್ ಶೆಟ್ಟಿ
ಶ್ರೀ ಎ. ಜೆ. ಶೆಟ್ಟಿ
ಶ್ರೀಮತಿ ಗೀತ ಭಗವಾನ್‌ದಾಸ್ ರೈ
ಶ್ರೀ ಶ್ರೀನಿವಾಸ ಸೂಡ

**ಪ್ರಕಾಶಕರು:**
ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿ

## ಒಳ ಪುಟಗಳಲ್ಲಿ.....

| | ಪುಟ |
|---|---|
| ಸಂಪಾದಕೀಯ | 2 |
| ಅಧ್ಯಕ್ಷರ ಮಾತು | 3 |
| ಗೌರವ ಕಾರ್ಯದರ್ಶಿಯವರ ವರದಿ | 4 |
| ದ್ವಂದ್ವ | 5 |
| ಬಂಟರ ಸಂಘ ಬೆಂಗಳೂರು – ಮಹಿಳಾ ವಿಭಾಗ | 7 |
| ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ– II ವಿಸ್ಮಯ 2024' ಶಾಲಾ–ಕಾಲೇಜು ವಾರ್ಷಿಕೋತ್ಸವ | 9 |
| ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ 2024–26 | 10 |
| Bunts Sangha R.N.S. Vidyaniketan Report on Pre-primary Annual Day-2024-25 | 11 |
| ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ ರಜತ ಮಹೋತ್ಸವ ಸಮಾರಂಭ | 12 |
| ಸದ್ಭಕ್ತರೆದೆಯಲ್ಲಿ ಭಗವಂತನಿರುವನು: ಭಜನೆಯಿಂದ ಭಗವಂತನ ಸನಿಹ ಸಾಧ್ಯ | 16 |
| ಯುವ ವಿಭಾಗ– ಹೊಸ ವರ್ಷ ಆಚರಣೆ | 17 |
| ಬಂಟರ ಸಂಘ ಬೆಂಗಳೂರು– ಕ್ರೀಡಾ ಸಮಿತಿ –2024–25 | 21 |

### ಮುಖ ಪುಟ

2025ರ ಸಂಭ್ರಮದೊಂದಿಗೆ ಶ್ರೀ ವರಸಿದ್ಧಿ ವಿನಾಯಕನ ರಜತ ಮಹೋತ್ಸವ – ಜನವರಿ 19

ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾಕೂಟ ಕ್ರೀಡಾಕೂಟ – ಥ್ರೋಬಾಲ್ ಪಂದ್ಯಾವಳಿ

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ –I ಮತ್ತು II ರ ಶಾಲಾ ವಾರ್ಷಿಕೋತ್ಸವ

ಯುವ ವಿಭಾಗದ ವತಿಯಿಂದ ಹೊಸ ವರ್ಷಾಚರಣೆ

ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ. – ಸಂಪಾದಕ ಮಂಡಳಿ



# ಸಂಪಾದಕೀಯ

## ಬಂಟರು ಯಾನೆ ನಾಡವರು; ಪ್ರಾದೇಶಿಕ ದೃಷ್ಟಿಕೋನ

ಬಂಟ ಸಮುದಾಯದ ಚಾರಿತ್ರಿಕ ಹಿನ್ನೆಲೆಯ ಕುರಿತು ಈಗಾಗಲೇ ಬಹುಸ್ವರೂಪ ಮತ್ತು ಬಹುಮಾದರಿಯ ದಾಖಲೀಕರಣ ಹಾಗೂ ಅಧ್ಯಯನಗಳು ನಡೆದಿವೆ. ಇಪ್ಪತ್ತನೇ ಶತಮಾನದ ಕೊನೆ ಮತ್ತು ಇಪ್ಪತ್ತೊಂದನೇ ಶತಮಾನದ ಆರಂಭದ ದಶಕಗಳಲ್ಲಿ ಈ ನೆಲೆಯ ಅಧ್ಯಯನಗಳು ತೀವ್ರಗತಿಯಲ್ಲಿ ಮತ್ತು ವಿಸ್ತೃತವಾಗಿ ನಡೆದಿರುವುದನ್ನು ಗಮನಿಸಬಹುದು. ಆರಂಭದ ಹಂತದಲ್ಲಿ ಬಂಟ ಸಮುದಾಯದ ಕುರಿತ ಅಧ್ಯಯನಗಳ ಸಂಗ್ರಹ ಮತ್ತು ಸಂಪಾದನೆಯ ಹಂತದಲ್ಲಿ ನಡೆದರೆ ಇತ್ತೀಚಿನ ವರ್ಷಗಳಲ್ಲಿ ಇದು ವಿಶ್ಲೇಷಣಾತ್ಮಕ ನೆಲೆಯಲ್ಲಿ ವಿಸ್ತಾರಗೊಂಡಿರುವುದು ವಾಸ್ತವ. ಈ ಹಿನ್ನೆಲೆಯಿಂದ ಬಂಟ ಸಮುದಾಯದ ಚಾರಿತ್ರಿಕ ಗುರುತುಗಳ ಕುರಿತು ಕಿರುನೋಟ ಹರಿಸುವ ಪ್ರಯತ್ನ ಇಲ್ಲಿದೆ.

ಬಂಟ ಎಂಬ ಪದಕ್ಕೆ ವೀರ ಅಥವಾ ಶೂರ ಎಂಬ ಸಮಾನ ಅರ್ಥ ಬಳಕೆಯಲ್ಲಿದೆ. ಸೈನಿಕನಾಗಿ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಯನ್ನು ಬಂಟ ಎಂದು ಅರ್ಥೈಸಲಾಗಿದೆ. ಇನ್ನು ನಾಡವ ಎಂಬ ಪದ ನಾಮವಾಚಕವಾಗಿದ್ದು, ಆಡಳಿತದಲ್ಲಿ ಸಹಭಾಗಿಯಾಗುವವನು ಅಥವಾ ಆಡಳಿತದಲ್ಲಿ ಪಾಲುದಾರ ಎಂಬ ಅರ್ಥದಲ್ಲಿ ಬಳಕೆಯಾಗಿದೆ. ಬಂಟ ಮತ್ತು ನಾಡವ-ಈ ಎರಡೂ ಪದಗಳನ್ನು ಒಟ್ಟಾಗಿ ಗಮನಿಸಿದರೆ ಹಿಂದಿನ ಅಥವಾ ರಾಜಪ್ರಭುತ್ವದ ಕಾಲಘಟ್ಟದಲ್ಲಿ ಈ ಸಮುದಾಯವು ನಿರ್ವಹಿಸಿರಬಹುದಾದ ವೃತ್ತಿ ಮತ್ತು ಜವಾಬ್ದಾರಿಯ ಸ್ವರೂಪದ ಪರಿಚಯವಾಗುತ್ತದೆ. ಬಂಟ ಸಮುದಾಯದ ಪುರುಷರು ಹಿಂದೆ ರಾಜರ ಸೈನ್ಯದಲ್ಲಿ ಮತ್ತು ಆಡಳಿತದ ವಿವಿಧ ಘಟಕಗಳಲ್ಲಿ ಜವಾಬ್ದಾರಿಯುತವಾದ ಸ್ಥಾನಮಾನಗಳನ್ನು ಹೊಂದಿದ್ದರ ಬಗ್ಗೆ ಉಲ್ಲೇಖಗಳು ಲಭ್ಯವಿವೆ. ಇಂದಿಗೂ ಸಹ ಬಂಟ ಸಮುದಾಯದ ಅನೇಕ ಮಂದಿ ಸರ್ಕಾರಿ ಮತ್ತು ಖಾಸಗಿ ವಲಯದ ವಿವಿಧ ಆಡಳಿತಾತ್ಮಕ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತ ತಮ್ಮದೇ ಛಾಪು ಮೂಡಿಸಿರುವ ನೂರಾರು ನಿದರ್ಶನಗಳಿವೆ. ಬಂಟರ ಜೀವನ ಕ್ರಮ, ಆಚಾರ-ವಿಚಾರಗಳಲ್ಲಿ ಒಂದಿಷ್ಟು ಪ್ರಾದೇಶಿಕ ಭಿನ್ನತೆಗಳನ್ನು ಕಾಣಬಹುದಾದರೂ ಅವರಲ್ಲಿ ರಕ್ತಗತವಾಗಿ ಬೆಳೆದು ಬಂದಿರುವ ಪರಾಕ್ರಮ, ನಾಯಕತ್ವ, ಸಂಘಟನಾ ಕೌಶಲ್ಯ- ಇವೆಲ್ಲವೂ ಅವರ ವ್ಯಕ್ತಿತ್ವದ ಕುರುಹುಗಳಾಗಿ ಸದಾ ಕಾಲ ಉಳಿದುಕೊಳ್ಳುತ್ತವೆ.

ವರ್ತಮಾನದ ದಿನಗಳಲ್ಲಿ ಬಂಟರು ಮತ್ತು ನಾಡವರ ಮಧ್ಯೆ ಸಾಮಾಜಿಕ ಸ್ತರದಲ್ಲಿ ವಿಶೇಷ ಅಂತರವನ್ನು ಕಾಣಲಾರೆವು. ಆದರೆ ಪ್ರಾದೇಶಿಕವಾದ ಒಂದಿಷ್ಟು ಭಿನ್ನತೆಗಳು ಇದ್ದೇ ಇವೆ. ಒಂದು ಪ್ರದೇಶದಲ್ಲಿ ಖಾಯಂ ಆಗಿ ನೆಲೆ ನಿಂತ ಬಳಿಕ, ಬಂಟರು ಅಲ್ಲಿನ ರೀತಿ ರಿವಾಜುಗಳಿಗೆ ಸಹಜವಾಗಿ ಹೊಂದಿಕೊಳ್ಳುತ್ತ ಬಂದರು ಮತ್ತು ಅಲ್ಲಿನ ಜೀವನಕ್ರಮಕ್ಕೆ ಅನುಗುಣವಾಗಿ ಕೆಲ ಬದಲಾವಣೆಗಳನ್ನು ಅಳವಡಿಸಿಕೊಂಡರು. ಇದು ಒಂದರ್ಥದಲ್ಲಿ ನಿಸರ್ಗ ಸಹಜ ಪ್ರಕ್ರಿಯೆ. "ಕಳೆದ ಶತಮಾನದವರೆಗೆ ಬಂಟರು ಮತ್ತು ನಾಡವರ ಮಧ್ಯೆ ರಕ್ತ ಸಂಬಂಧವೂ ಕಡಿಮೆ ಇತ್ತು" ಎಂಬುದಾಗಿ ಹಿರಿಯ ಸಂಶೋಧಕ ದಿ| ಡಾ. ಪಿ. ಗುರುರಾಜ ಭಟ್ ಅವರು ಅಭಿಪ್ರಾಯಪಡುತ್ತಾರೆ. ಭೌಗೋಳಿಕವಾದ ಭಿನ್ನತೆಯೇ ಇದಕ್ಕೆ ಕಾರಣವಾದ ಪ್ರಮುಖ ಅಂಶ ಎನ್ನಬಹುದು. ಇನ್ನು ಬಂಟರು ಮತ್ತು ನಾಡವರಲ್ಲಿ ಭಾಷಾ ಬೇಧವನ್ನು ಗುರುತಿಸುವುದು ಕಷ್ಟ ಎಂಬುದಾಗಿ ಸಂಶೋಧಕ ಡಾ. ಬಿ. ಜಗದೀಶ್ ಶೆಟ್ಟಿ ಅವರು ಅಭಿಪ್ರಾಯಪಡುತ್ತ, ಕಾರ್ಕಳ ತಾಲೂಕು ಮುಂಡ್ಕೂರಿನ ಶಾಸನದಲ್ಲಿ (ಕ್ರಿ.ಶ.1293) ಉಲ್ಲೇಖವಾಗಿರುವ ನಾಡವರು ತುಳು ಭಾಷಾಭಿಮಾನಿಗಳಾಗಿರಬೇಕು ಎಂಬುದಾಗಿ ವಿವರಿಸಿದ್ದಾರೆ.

ಬಂಟರು ಇಂದು ಮುಖ್ಯವಾಗಿ ಅವಿಭಜಿತ ದಕ್ಷಿಣ ಕನ್ನಡ ಮತ್ತು ಕಾಸರಗೋಡು ಜಿಲ್ಲೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಾಸ್ತವ್ಯ ಹೊಂದಿದ್ದರೂ ಅಥವಾ ತಮ್ಮ ಮೂಲವನ್ನು ಈ ಭೌಗೋಳಿಕ ವ್ಯಾಪ್ತಿಗೆ ಮಿತಗೊಳಿಸಿಕೊಂಡರೂ, ಹಿಂದೆ ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ, ಅದರಲ್ಲೂ ಮಲೆನಾಡು ಪ್ರದೇಶಗಳಲ್ಲಿ ಇವರು ವಾಸ್ತವ್ಯ ಹೊಂದಿದ್ದ ಬಗ್ಗೆ ಅನೇಕ ದಾಖಲೆಗಳಿವೆ. ಮುಖ್ಯವಾಗಿ ಶಿಕಾರಿಪುರದ ಶಾಸನ (ಕ್ರಿ.ಶ. 1170), ದೇವನಹಳ್ಳಿಯ ಶಾಸನ (ಕ್ರಿ.ಶ.1338), ತೀರ್ಥಹಳ್ಳಿಯ ಶಾಸನ (ಕ್ರಿ.ಶ.1362), ಕೊಪ್ಪದ ಶಾಸನ (ಕ್ರಿ.ಶ 1372) ಇತ್ಯಾದಿ ದಾಖಲೆಗಳು ಈ ಅಂಶವನ್ನು ಇನ್ನಷ್ಟು ದೃಢಪಡಿಸಿವೆ. ಹೀಗೆ ಧಾರ್ಮಿಕ ಮತ್ತು ಸಾಂಸ್ಕೃತಿಕ ರಂಗದಲ್ಲಿ ಬಂಟರು ಮತ್ತು ನಾಡವರು ಹೊಂದಿದ್ದ ಸ್ಥಾನಮಾನಗಳ ಬಗ್ಗೆ ಅನೇಕ ಚಾರಿತ್ರಿಕ ಉಲ್ಲೇಖಗಳು ಲಭ್ಯವಾಗಿದ್ದು, ಈ ಕುರಿತಾದ ವಿಸ್ತೃತ ಅಧ್ಯಯನ ಮತ್ತು ಸಂಶೋಧನೆಗೆ ವಿಪುಲ ಅವಕಾಶಗಳಿವೆ.

ನಮ್ಮೆಲ್ಲಾ ಓದುಗರಿಗೆ 'ಸ್ನೇಹ ಚಿಂತನೆ' ಬಳಗದ ವತಿಯಿಂದ 2025ರ ಕ್ಯಾಲೆಂಡರ್ ವರ್ಷದ ಹೃತ್ಪೂರ್ವಕ ಶುಭಾಶಯಗಳು. ಈ ವರ್ಷ ನಮ್ಮೆಲ್ಲರ ಬದುಕಿನಲ್ಲಿ ಇನ್ನೊಂದಿಷ್ಟು ಹೊಸ ಅರಿವು-ಆಲೋಚನೆ-ಅನುಭವಗಳಿಗೆ ಸಾಕ್ಷಿಯಾಗಲಿ.

**ರವೀಂದ್ರ ಶೆಟ್ಟಿ ಹಟ್ಟಿಯಂಗಡಿ**
**ಸಂಪಾದಕರು**

# ಅಧ್ಯಕ್ಷರ ಮಾತು



**ಎಳ್ಳು ಬೆಲ್ಲ ತಿಂದು ಒಳ್ಳೆಯ ಮಾತಾಡೋಣ**

**ಎಲ್ಲಾ ಕಹಿ ಮರೆತು ಒಳ್ಳೆಯ ಭಾಂದವ್ಯ ಬೆಸೆಯೋಣ......**

**ಮಕರ ಸಂಕ್ರಾಂತಿಯ ಶುಭಾಶಯಗಳು......**

ಸಮಸ್ತ ಬಂಟ ಭಾಂದವರಿಗೆ ಕ್ಯಾಲೆಂಡರ್ ಹೊಸ ವರ್ಷ 2025 ಎಲ್ಲರಿಗೂ ಸುಖ, ಶಾಂತಿ, ನೆಮ್ಮದಿ, ಸಮೃದ್ಧಿಯನ್ನು ತರಲಿ ಎಂದು ಶುಭ ಹಾರೈಸುತ್ತೇವೆ.

ದಿನಾಂಕ 15.12.2024ರಂದು ಬಂಟರ ಸಂಘ ಆರ್. ಎನ್. ಎಸ್. – II ಯಲಚಗುಪ್ಪೆಯಲ್ಲಿ, ಶಾಲೆಯ ತೆರೆದ ಮೈದಾನದಲ್ಲಿ ನಡೆದ ವಾರ್ಷಿಕೋತ್ಸವದಲ್ಲಿ ವಿದ್ಯಾರ್ಥಿಗಳು ಮತ್ತು ಪೋಷಕರು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವುದರ ಮೂಲಕ ಬಹು ವಿಜೃಂಭಣೆಯ ಕಾರ್ಯಕ್ರಮದ ಯಶಸ್ಸಿಗೆ ಸಾಕ್ಷಿಯಾದರು.

ದಿನಾಂಕ 21.12.2024ರಂದು ನಡೆದ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ – I ರ ಪೂರ್ವ ಪ್ರಾಥಮಿಕ ಶಾಲಾ ವಾರ್ಷಿಕೋತ್ಸವವು ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನದಲ್ಲಿ ವೈಭವಯುತವಾಗಿ ಸಂಭ್ರಮದಿಂದ ನೆರವೇರಿತು.

ದಿನಾಂಕ 28.12.2024ರಂದು ನಡೆದ ವಿಶೇಷ ಮಹಾಸಭೆಯಲ್ಲಿ ಸಂಘದ ಸದಸ್ಯರು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಸರ್ವ ಸದಸ್ಯರ ಸಮಕ್ಷಮದಲ್ಲಿ ಮುಂದಿನ ಕಾರ್ಯವೈಖರಿಗಳ ಬಗ್ಗೆ ಸೂಕ್ತ ನಿರ್ಧಾರ ಕೈಗೊಂಡಿದ್ದು, ವಿಶೇಷ ಮಹಾಸಭೆಯ ನಡಾವಳಿಯ ವರದಿಯನ್ನು ಮುಂಬರುವ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

ಬಂಟರ ಸಂಘದ ಯುವ ವಿಭಾಗದ ನೇತೃತ್ವದಲ್ಲಿ ನಡೆದ ಹೊಸ ವರ್ಷದ ಆಚರಣೆಯಲ್ಲಿ ಸರಿಗಮಪ ಖ್ಯಾತಿಯ ಶಿವಾನಿ ನವೀನ್ ಮತ್ತು ಅರೆಹೊಳೆ ಪ್ರತಿಷ್ಠಾನದವರು ನಡೆಸಿಕೊಟ್ಟ ಮನೋರಂಜನಾ ಕಾರ್ಯಕ್ರಮಗಳು ನೆರೆದ ಜನರ ಮನಸೂರೆಗೊಂಡಿತು.

ಕ್ಯಾಲೆಂಡರ್ ಹೊಸ ವರ್ಷ 2025 ಬದಲಾದ ಈ ಸಂಭ್ರಮದಲ್ಲಿ, ಹೊಸ ಹುರುಪಿನೊಂದಿಗೆ ಪ್ರಾರ್ಥನಾ ಮಂದಿರ ಸಮಿತಿಯ ಸದಸ್ಯರ ತಂಡವು ಪ್ರಾರ್ಥನಾ ಮಂದಿರವು 25 ಸಂವತ್ಸರಗಳನ್ನು ಯಶಸ್ವಿಯಾಗಿ ಪೂರೈಸಿದ ಈ ಸುಸಂದರ್ಭದಲ್ಲಿ ದಿನಾಂಕ 19.01.2025 ರಂದು "ರಜತ ಮಹೋತ್ಸವ"ದ ತಯಾರಿಗಳಿಗೆ ಉತ್ಸಾಹದ ಟೊಂಕ ಕಟ್ಟಿದೆ. ಈ ನಿಮಿತ್ತ ಹಲವಾರು ವಿಶೇಷ ಸೇವಾ ಕಾರ್ಯಕ್ರಮಗಳ ಯೋಜನೆಯನ್ನು ರೂಪಿಸಲಾಗಿದೆ. ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ದೇವರ ದಿವ್ಯಾನುಗ್ರಹಕ್ಕೆ ಪಾತ್ರರಾಗಬೇಕಾಗಿ ವಿನಂತಿ. ಈ ಎಲ್ಲಾ ಕಾರ್ಯಕ್ರಮಗಳು ನಿರ್ವಿಘ್ನವಾಗಿ ನಡೆಯಲೆಂದು ದೇವರಲ್ಲಿ ಪ್ರಾರ್ಥಿಸುತ್ತೇವೆ.

ದಿನಾಂಕ 26.01.2025, ಭಾನುವಾರದಂದು ನಡೆಯಲಿರುವ "ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆ" ಕಾರ್ಯಕ್ರಮವು ನಡೆಯಲಿದ್ದು, ಸದಸ್ಯ ಭಾಂದವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಿರೆಂದು ಆಶಿಸುತ್ತೇವೆ.

**ಇಂತಿ ತಮ್ಮ ಪ್ರೀತಿಯ**
**ಸಿಎ. ಅಶೋಕ್ ಶೆಟ್ಟಿ ಎಂ**
**ಅಧ್ಯಕ್ಷರು**

# ಗೌರವ ಕಾರ್ಯದರ್ಶಿಯವರ ವರದಿ



ಸದಸ್ಯ ಬಾಂಧವರಿಗೆಲ್ಲರಿಗೂ ಹೊಸ ವರ್ಷ ಹಾಗೂ ಮಕರ ಸಂಕ್ರಾಂತಿ ಹಬ್ಬದ ಶುಭಾಶಯಗಳು.

ಹೊಸ ವರ್ಷ ಹೊಸ ಸಂಕಲ್ಪ, ಎಲ್ಲಾ ಯೋಜನೆಗಳನ್ನು ಸಾಕಾರಗೊಳಿಸಲು ಜೊತೆಯಾಗಿ ಸಾಗೋಣ ನಾವೆಲ್ಲರೂ.

**ಮಾನ್ಯ ಸದಸ್ಯರೇ,**

ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆಯ ಪ್ರಯುಕ್ತ ದಿನಾಂಕ 24.11.2024ರಂದು ವಿಜಯ ಬ್ಯಾಂಕ್ ಲೇಔಟ್‌ನ ದಿ. ಅನಂತ್ ಕುಮಾರ್ ಕ್ರೀಡಾಂಗಣದಲ್ಲಿ ಥ್ರೋಬಾಲ್ ಪಂದ್ಯಾಟವನ್ನು, ದಿನಾಂಕ 01.12.2024ರಂದು ನಾಗರಬಾವಿ ಪಾಪರೆಡ್ಡಿಪಾಳ್ಯ ಅಕ್ಷಯ ಸ್ಪೋರ್ಟ್ಸ್ ಅಕಾಡೆಮಿಯಲ್ಲಿ ಶಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯನ್ನು ಹಾಗೂ 08.12.2024ರಂದು ಸಂಘದ ಆವರಣದಲ್ಲಿ ಚೆಸ್, ಕೇರಂ, ಟೆನ್ನಿಕ್ವಾಟ್, ಟೇಬಲ್ ಟೆನ್ನಿಸ್ ಹಾಗೂ ವಾಲಿಬಾಲ್ ಪಂದ್ಯಾವಳಿಯನ್ನು ಆಯೋಜಿಸಲಾಗಿತ್ತು. ಈ ಎಲ್ಲಾ ಸ್ಪರ್ಧೆಗಳಲ್ಲಿ ಸಂಘದ ಸದಸ್ಯರು ಹಾಗೂ ಅವರ ಮಕ್ಕಳು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಸ್ಪರ್ಧೆಗಳನ್ನು ಯಶಸ್ವಿಯಾಗಿ ಆಯೋಜಿಸಿದ ಕ್ರೀಡಾ ಸಮಿತಿಯ ಚೇರ್‌ಪರ್ಸನ್ ಶ್ರೀ ಸುರೇಂದ್ರ ಶೆಟ್ಟಿ ಹಡಾಳಿ, ಸಂಚಾಲಕರಾದ ಶ್ರೀ ಸಬನ್ ಶೆಟ್ಟಿ ಗುಡಿಬೆಟ್ಟು ಹಾಗೂ ಅವರ ತಂಡದ ಸದಸ್ಯರಿಗೆ ವಂದನೆಗಳು.

ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆಯ ಪ್ರಯುಕ್ತ ದಿನಾಂಕ 14.12.2024ರಂದು ರಂಗೋಲಿ, ಚಿತ್ರ ಬಿಡಿಸುವ ಸ್ಪರ್ಧೆ, ದಿನಾಂಕ 15.12.2024ರಂದು ಛದ್ಮವೇಷ, ಆಶುಭಾಷಣ ಮತ್ತು ಸಂಗೀತ ಸ್ಪರ್ಧೆಗಳನ್ನು ಸಂಘದ ಆವರಣದಲ್ಲಿ ಅಚ್ಚುಕಟ್ಟಾಗಿ ಆಯೋಜಿಸಿದಂತಹ ಸಾಂಸ್ಕೃತಿಕ ಸಮಿತಿಯ ಚೇರ್‌ಪರ್ಸನ್ ಶ್ರೀ ರಮೇಶ್ ಜಿ. ಶೆಟ್ಟಿ, ಸಂಚಾಲಕರಾದ ಶ್ರೀ ಸಂತೋಷ್ ಶೆಟ್ಟಿ ತಲೇಕಳ ಮತ್ತು ಅವರ ತಂಡಕ್ಕೆ ಅಭಿನಂದನೆಗಳು. ಈ ಎಲ್ಲಾ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ಮತ್ತು ಅವರ ಮಕ್ಕಳು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಪ್ರಥಮ ಬಾರಿಗೆ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–II ರ ಶಾಲಾ ವಾರ್ಷಿಕೋತ್ಸವವನ್ನು ದಿನಾಂಕ 15.12.2024ರಂದು ಶಾಲಾ ಆವರಣದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ತುಮಕೂರು ಶ್ರೀ ಸಿದ್ಧಾರ್ಥ ಅಕಾಡೆಮಿಯ ಉಪ ಕುಲಪತಿಗಳಾದ ಡಾ. ಬಾಲಕೃಷ್ಣ ಪಿ. ಶೆಟ್ಟಿಯವರು ಭಾಗವಹಿಸಿದ್ದರು.

ದಿನಾಂಕ 21.12.2024ರಂದು ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನದ ಪ್ರಿ ಪ್ರೈಮರಿ ವಿಭಾಗದ ವಾರ್ಷಿಕೋತ್ಸವವು ಸಂಘದ ಸಭಾಂಗಣದಲ್ಲಿ ವಿಜೃಂಭಣೆಯಿಂದ ಜರುಗಿತು. ಪ್ರೆಸಿಡೆನ್ಸಿ ಯೂನಿವರ್ಸಿಟಿಯ ಪ್ರೊ ವೈಸ್ ಚಾನ್ಸೆಲರ್ ಶ್ರೀಮತಿ ವಿದ್ಯಾ ಎಸ್. ಶೆಟ್ಟಿಯವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ದಿನಾಂಕ 28.12.2024ರಂದು ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನದಲ್ಲಿ ನಡೆದ ವಿಶೇಷ ಸರ್ವ ಸದಸ್ಯರ ಮಹಾಸಭೆಯಲ್ಲಿ ಭಾಗವಹಿಸಿ ಸಲಹೆ ಸೂಚನೆಗಳನ್ನು ನೀಡಿದ ಎಲ್ಲಾ ಸದಸ್ಯರಿಗೂ ಧನ್ಯವಾದಗಳು.

ಯುವ ವಿಭಾಗದ ವತಿಯಿಂದ ಸಂಘದ ಆಚರಣೆಯಲ್ಲಿ 2025 ಹೊಸ ವರ್ಷವನ್ನು ಸ್ವಾಗತಿಸುವ ಕಾರ್ಯಕ್ರಮವು ಯಶಸ್ವಿಯಾಗಿ ಜರುಗಿತು. ನೃತ್ಯ, ಮೋಜಿನ ಆಟ, ಸಂಗೀತ ಮೊದಲಾದ ಕಾರ್ಯಕ್ರಮಗಳೊಂದಿಗೆ ಸದಸ್ಯ ಬಾಂಧವರು ಹೊಸವರ್ಷಾಚರಣೆಯಲ್ಲಿ ಪಾಲ್ಗೊಂಡರು. ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಿದ ಯುವ ವಿಭಾಗದ ಚೇರ್‌ಪರ್ಸನ್ ಶ್ರೀ ಅಜಿತ್ ವಿ. ಶೆಟ್ಟಿ, ಸಂಚಾಲಕರಾದ ಶ್ರೀ ಪ್ರಸಾದ್ ಶೆಟ್ಟಿ ಅರೆಹೊಳೆ ಹಾಗೂ ಅವರ ತಂಡಕ್ಕೆ ಅಭಿನಂದನೆಗಳು.

ಸಂಘದ ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದ 25ನೇ ವಾರ್ಷಿಕೋತ್ಸವದ ಪ್ರಯುಕ್ತ ರಜತ ಮಹೋತ್ಸವವನ್ನು ದಿನಾಂಕ 19.01.2025ರಂದು ಶ್ರದ್ಧಾ ಭಕ್ತಿಯಿಂದ ಆಚರಿಸಲಾಗುವುದು. ಸದಸ್ಯರೆಲ್ಲರೂ ಭಾಗವಹಿಸಬೇಕಾಗಿ ವಿನಂತಿ.

ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆಯನ್ನು ದಿನಾಂಕ 26.01.2025ರಂದು ಸಂಘದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನದಲ್ಲಿ ಆಯೋಜಿಸಲಿದ್ದು, ಸದಸ್ಯರೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

ಇಂತಿ ತಮ್ಮ ಪ್ರೀತಿಯ
**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಗೌರವ ಕಾರ್ಯದರ್ಶಿ

# ದ್ವಂದ್ವ



ಶ್ರೀಪ್ರಸಾದ್ ಶೆಟ್ಟಿ

ಪಕ್ಕದ ಮನೆ ಕೊಟ್ಟಿಗೆಯಲ್ಲಿ ಯಾಕೋ ಕರುವೊಂದು ಸಿಕ್ಕಾಪಟ್ಟೆ ಸದ್ದು ಮಾಡುತ್ತಿತ್ತು. ಏನನ್ನೋ ನೋಡಿ ಅದು ಭಯ ಪಟ್ಟ ಹಾಗಿತ್ತು. ಅಷ್ಟರಲ್ಲಿ ಪಕ್ಕದ್ಮನೆ ಮಾದ ಓಡೋಡಿ ಗೌಡ್ರ ಮನೆಗೆ ಬಂದ. ಗೌಡ್ರೆ ಹುಲಿ ಮತ್ತೆ ಬಂದ್ಯೈತೆ ಹಟ್ಟಿಗೆ, ಬೇಗ ಕೋವಿ ತಗೊಂಡು ಬನ್ನಿ ಅಂದ. ಗೋಡೆಯಲ್ಲಿ ನೇತು ಹಾಕಿದ್ದ ಕೋವಿ ಎತ್ತಿ ಸರ ಸರನೆ ಮಾದನ ಹಟ್ಟಿಗೆ ಹೊರಟರು ಗೌಡ್ರು. ಹಟ್ಟಿಯೊಳಗೆ ಇಣುಕಿ ನೋಡಿದರೆ ಹುಲಿ ಕರುವಿನ ಕುತ್ತಿಗೆಗೆ ಬಾಯಿ ಹಾಕಿ ಎಳೆಯುತ್ತಾ ಇತ್ತು. ಕರುವನ್ನು ಕಟ್ಟಿ ಹಾಕಿದ್ದರಿಂದ ಅದನ್ನು ಎಳೆದುಕೊಂಡು ಹೋಗೋದು ಹುಲಿಗೆ ಸಾಧ್ಯವಾಗಿರಲಿಲ್ಲ.. ಕೋವಿ ಎತ್ತಿ ಹುಲಿಗೆ ಗುರಿ ಇಟ್ಟರು ಗೌಡ್ರು. ಡಂ ಡಂ ಎಂದು ಸಿಡಿಯಿತು ಗುಂಡು. ಮರುಕ್ಷಣ ಹುಲಿ ಅಲ್ಲಿಂದ ಹಟ್ಟಿ ಗೋಡೆ ಮೇಲೆ ನೆಗೆದು ಓಡಿ ಹೋಯಿತು. ಆದರೆ ಗೌಡ್ರು ಹೊಡೆದ ಒಂದು ಗುಂಡೂ ಕೂಡ ಹುಲಿಗೆ ತಾಗಿರಲಿಲ್ಲ. ಎರಡು ಗುಂಡುಗಳು ಗುರಿ ತಪ್ಪಿ ಗೋಡೆಗೆ ಹೊಡೆದಿದ್ದನ್ನು ಸ್ಪಷ್ಟವಾಗಿ ನೋಡಿದ್ದರು ಗೌಡರು. ಆದರೂ ಹುಲಿ ಓಡಿದ್ದು ಯಾಕೆ ಅಂತ ಗೌಡ್ರು ಯೋಚಿಸುತ್ತ ಇರುವಷ್ಟರಲ್ಲಿ ಗುಂಡಿನ ಸದ್ದು ಕೇಳಿದ ಮಾದ ಹಟ್ಟಿಯೊಳಗೆ ಬಂದ. ಹುಲಿ ಪರಾರಿಯಾಗಿತ್ತು. ಕರುವಿನ ಗಂಟಲಲ್ಲಿ ಹುಲಿಯ ಹಲ್ಲಿನ ಗುರುತು ಬಿಟ್ಟರೆ ಬೇರೆ ಏನು ಜಾಸ್ತಿ ಏಟಾಗಿರಲಿಲ್ಲ. ಕರುವಿನ ಗಂಟಲಿಂದ ಹರಿದ ನೆತ್ತರ ಬಿಂದುಗಳು ಹಟ್ಟಿಯೊಳಗೆ ಅಲ್ಲಲ್ಲಿ ಕಾಣುತ್ತಿತ್ತು. ಅದನ್ನು ನೋಡಿದ ಮಾದ ಅಂತು ಗೌಡ್ರು ಹೊಡೆದ ಗುಂಡುಗಳು ಹುಲಿಗೆ ಸರಿಯಾಗೇ ನಾಟಿವೆ. ಇವತ್ತೋ ನಾಳೆನೋ ಹುಲಿ ಸಾಯೋದು ಗ್ಯಾರಂಟೀ ಅಂತ ಅಕ್ಕ ಪಕ್ಕದ ಮನೆಯವರಿಗೆಲ್ಲ ಹೇಳಿ ಬಿಟ್ಟ. ತಾನು ಹೊಡೆದ ಯಾವ ಗುಂಡೂ ಹುಲಿಗೆ ತಾಗಿಲ್ಲ ಅಂತ ಗೊತ್ತಿದ್ರು ಗೌಡ್ರು ಸುಮ್ನಿದ್ರು. ಬಿಟ್ಟಿ ಪ್ರಚಾರ ಯಾರಿಗೆ ಬೇಡ. ಅಪ್ಪಿ ತಪ್ಪಿ ಮುಂದೆ ಯಾವತ್ತಾದ್ರು ದಾಳಿ ಮಾಡಿದರೆ ಆಮೇಲೆ ನೋಡಿಕೊಳ್ಳೋಣ ಅಂತ ಸುಮ್ನಿದ್ರು ಗೌಡ್ರು. ಮಾರನೇ ದಿನ ಬೆಳಗಾಗೋದ್ರೊಳಗೆ ಗೌಡ್ರು ಹುಲಿ ಕೊಂದ ಸುದ್ದಿ ಊರಿಡೀ ಹರಡಿತು, ಗೌಡ್ರ ಶೌರ್ಯದ ಕತೆ ಊರ ಜನರ ಬಾಯಲ್ಲೆಲ್ಲ. ಗೌಡರಿಗೆ ಮಾತ್ರ ಗುಂಡು ತಗಲದೇ ಹುಲಿ ಓಡಿದ್ಯಾಕೆ ಅನ್ನೋದು ಮಾತ್ರ ಅರ್ಥ ಆಗ್ಲೇ ಇಲ್ಲ.. ಇಷ್ಟಕ್ಕೂ ಗೌಡ್ರು ಅಬ್ಬಬ್ಬಾ ಅಂದ್ರೆ ಒಂದೆರಡು ಸಲ ಕೋವಿ ಚಲಾಯಿಸಿರಬಹುದೇನೋ. ಅವರಿಗದು ದೊರಕಿದ್ದು ಕೂಡ ಆಕಸ್ಮಿಕ. ನಕ್ಸಲ್ ನಿಗ್ರಹ ಪಡೆಯವರು ನಕ್ಸಲ್ ಗುಂಪೊಂದರ ಅಡಗುದಾಣದ ಮೇಲೆ ನಡೆಸಿದ ದಾಳಿಯಲ್ಲಿ ಪೊಲೀಸರಿಗೆ ದೊರಕಿದ್ದ ಕೋವಿ ಅದು. ಸರಕಾರಕ್ಕೆ ಲೆಕ್ಕ ಕೊಡದೆ ಪೋಲಿಸ್ ಪಡೆಯಲ್ಲಿದ್ದ ಸಂಬಂದಿಯೊಬ್ಬ ಅದನ್ನು ಇವರಿಗೆ ಕೊಟ್ಟಿದ್ದ. ಇವರೋ ನಮ್ಮ ತಾತ ಈ ಬಂದೂಕಿಂದ ಅದೆಷ್ಟೋ ಹುಲಿ ಜಿಂಕೆಗಳನ್ನು ಬೇಟೆ ಆಡಿದ್ದರು ಆ ಕಾಲದಲ್ಲಿ ಅಂತ ಬಿಲ್ಡ್ ಅಪ್ ತಗೊಂಡಿದ್ರು. ವಾಸ್ತವದಲ್ಲಿ ಅಟ್ಟಿಸಿಕೊಂಡು ಬಂದ ಒಂದು ನಾಯನ್ನು ಓಡಿಸೋವಷ್ಟು ಎದೆಗಾರಿಕೆ ಇಲ್ದೇ ಇದ್ರೂ ಗೌಡ್ರು ಮುಂಚೆ ಬೇಟೆಗೆ ಹೋಗ್ತಾ ಇದ್ರಂತೆ, ಅದೆಷ್ಟೋ ಹುಲಿ ಚಿರತೆಗಳನ್ನು ಕೊಂದಿದ್ದರಂತೆ ಅಂತ ಗ್ರಾಮಸ್ಥರ ಬಾಯಲ್ಲಿ ಫೇಮಸ್ ಆಗಿದ್ದರು.

ಮಾರನೇ ದಿನ ಅದೆಷ್ಟೋ ಜಾನುವಾರುಗಳನ್ನು ಬಲಿ ಪಡೆದು ಅಮಾಯಕ ಗ್ರಾಮಸ್ತರ ನಿದ್ದೆ ಹಾಳು ಮಾಡಿದ ಆ ವ್ಯಾಘ್ರ ವ ಕೊಂದ ಗೌಡರಿಗೆ ಸನ್ಮಾನ ಮಾಡಬೇಕು ಅಂತ ಊರ ಯುವಕ ಸಂಘದಲ್ಲಿ ನಿರ್ಧಾರವಾಯ್ತು. ಪಂಚಾಯ್ತಿ ಕಡೆಯಿಂದ ನಡೆಯೋ ಗ್ರಾಮಸಭೆಗೂ ಮುಂಚೆ ಸನ್ಮಾನ ಸಮಾರಂಭವನ್ನು ಊರ ಶಾಲೆಯಲ್ಲಿ ಇಟ್ಟುಕೊಂಡಿದ್ದಾರೆ ಹಾಗೂ ನೀವು ಬರಬೇಕು ಅಂತ ಗೌಡರಿಗೆ ಸಂದೇಶವು ಬಂತು. ಗೌಡರಿಗಂತು ಖುಶಿಯೋ ಖುಷಿ. ಮುಂದಿನ ಬಾರಿ ಚುನಾವಣೆಗೆ ಸ್ಪರ್ಧಿಸಬೇಕು ಅಂದುಕೊಂಡಿದ್ದ ಅವರಿಗೆ ಇದೊಂದು ಸುವರ್ಣಾವಕಾಶವಾಗಿ ಕಂಡು ಕೂಡಲೇ ಒಪ್ಪಿ ಬಿಟ್ಟರು.

ಆದರೆ ಸಂಜೆಯ ವೇಳೆಗೆ ಮಾದ ತಂದ ಸುದ್ದಿ ಗೌಡ್ರ ನೆಮ್ಮದಿಯನ್ನೇ ಹಾಳು ಮಾಡಿತ್ತು. ಘಾಟಿಯ ಬಳಿಯಲ್ಲಿ ಅರಣ್ಯ ಇಲಾಖೆ ಚೆಕ್ ಪೋಸ್ಟ್‌ನಿಂದ ಕೊಂಚ ದೂರದಲ್ಲಿ ಹುಲಿಯೊಂದು ಸತ್ತಿದೆ. ಅದರ ಮೈಮೇಲೆ ಗುಂಡಿನ ಏಟುಗಳಿವೆ. ಅದು ನೀವು ಗುಂಡು ಹೊಡೆದ ಹುಲಿನೇ, ಸಂಶಯವೇ ಇಲ್ಲ. ನಾನು ಈಗ ತಾನೇ ನೋಡಿ ಬಂದೆ ಅಂದಿದ್ದ ಮಾದ. ಈಗ ಗೌಡ್ರ ಮನಸ್ಸು ಗೊಂದಲದ ಗೂಡಾಗಿತ್ತು. ನನ್ನ ಕೋವಿಯ ಗುಂಡು ಹುಲಿಗೆ ತಾಗೆ ಇಲ್ಲ ಇನ್ನು ಸಾಯೊದು ಹೇಗೆ? ಬಹುಶ ಆ ಹುಲಿನೇ

ಬೇರೆ ಈ ಹುಲಿನೇ ಬೇರೆ. ಆದರೂ ಗುಂಡೇ ತಾಗದೆ ಹುಲಿ ಹಟ್ಟಿಯಿಂದ ಓಡಿದ್ದಾದರು ಯಾಕೆ? ಇಲ್ಲಿ ಬರೋ ಮುಂಚೆನೇ ಏನಾದರು ಅದಕ್ಕೆ ಗುಂಡು ತಗುಲಿತ್ತೋ ಏನೋ. ಪ್ರಾಯಶ: ಅದಕ್ಕೆ ಇರಬಹುದು ಅದಕ್ಕೆ ಕರುವನ್ನು ಎಳೆದುಕೊಂಡು ಹೋಗೋಕ್ಕೆ ಸಾಧ್ಯವಾಗಿಲ್ಲ. ಅದಕ್ಕೆ ಮತ್ತೆ ನಾನು ಗುಂಡು ಹಾರಿಸಿದಾಗ ಗುಂಡಿನ ಶಬ್ದ ಕೇಳಿ ಭಯಪಟ್ಟು ಓಡಿರಬಹುದು. ಈಗ ಅರಣ್ಯ ಇಲಾಖೆಯ ಅಧಿಕಾರಿಗಳೇನಾದ್ರು ಹುಲಿಯ ಸಾವಿನ ತನಿಖೆ ಆರಂಬಿಸಿದರೆ ನನಗೆ ಆಪತ್ತು. ನಮ್ಮ ಗೌಡರೇ ಹುಲೀನ ಕೊಂದಿದ್ದು ಅಂತ ಹೆಮ್ಮೆಯಿಂದ ಗ್ರಾಮಸ್ತರು ಹೇಳಿಕೊಳ್ಳುತ್ತಾರೆ. ಕಾನೂನಿನಲ್ಲಿ ನರಬಕ್ಷಕ ಹುಲಿಯನ್ನು ಕೊಲ್ಲಬಹುದು ಅದೂ ಕೂಡ ಅರಣ್ಯ ಇಲಾಖೆಯ ಸಹಯೋಗದೊಂದಿಗೆ ಮಾತ್ರ. ಆದರೆ ನಮ್ಮ ಊರಿನಲ್ಲಿ ಕಾಣಿಸಿಕೊಂಡ ಹುಲಿ ಅಪ್ಪಿ ತಪ್ಪಿಯೂ ಗ್ರಾಮಸ್ತರ ಮೇಲೆ ಹಲ್ಲೆ ಮಾಡಿರಲಿಲ್ಲ. ಅದಕ್ಕೆಗ್ರಾಮಸ್ತರು ಪದೇ ಪದೇ ಹುಲಿಯ ಕಾಟದ ಬಗ್ಗೆ ಅರಣ್ಯಾಧಿಕಾರಿಗಳಿಗೆ ದೂರು ನೀಡಿದ್ದರೂ ಏನೂ ಪ್ರಯೋಜನವಾಗಿರಲಿಲ್ಲ. ಅಪ್ಪಿ ತಪ್ಪಿ ಅರಣ್ಯಾಧಿಕಾರಿಗಳ ಕೈಗೇನಾದ್ರು ನನ್ನ ಹೆಸರು ಸಿಕ್ಕಿಹಾಕಿಕೊಂಡರೆ ಆ ದೇವರೇ ಗತಿ. ವರ್ಷಗಟ್ಟಲೆ ಕೋರ್ಟು ಕಚೇರಿ ಸಹವಾಸ ಖಚಿತ. ಅದೂ ಕೂಡ ನಾನು ಮಾಡದೇ ಇರೋ ತಪ್ಪಿಗೋಸ್ಕರ. ಹಾಗಂತ ನಾನು ಹುಲೀನ ಹೊಡೆದಿಲ್ಲ, ನಾನು ಹೊಡೆದ ಗುಂಡು ಹುಲಿಗೆ ತಾಕಿಲ್ಲ ಅಂದ್ರೆ ಗ್ರಾಮಸ್ತರು ನನ್ನನ್ನು ಕೀಳಾಗಿ ಕಾಣಬಹುದು. ಇವನೊಬ್ಬ ಹೇಡಿ ಸುಳ್ಳುಗಾರ ಅಂತಾನು ಅಂದುಕೊಳ್ಳಬಹುದು. ಇಷ್ಟು ವರ್ಷ ಕಾಯ್ದುಕೊಂಡ ಮಾನ ಮರ್ಯಾದೆ ಎಲ್ಲ ಹೋಗುತ್ತೆ. ಚುನಾವಣೆಯಲ್ಲಿ ಇವರ ಓಟು ಪಡೆದು ಗೆಲ್ಲೋದು ಕನಸಿನ ಮಾತೇ ಸರಿ. ಗೌರವ, ಸನ್ಮಾನ ರಾಜಕೀಯ ಅವಕಾಶ ಒಂದು ಕಡೆ, ಕೋರ್ಟು ಕಚೇರಿ ಇನ್ನೊಂದೆಡೆ. ತಕ್ಕಡಿಯಲ್ಲಿ ತೂಗೋದು ಕಷ್ಟವಾಯ್ತು ಗೌಡರಿಗೆ. ಅದಕ್ಕೆ ಮನೆಯ ಜಗಲಿಯಲ್ಲಿ ಶತ ಪಥ ತಿರುಗಾಡ್ತಾ ಇದ್ದರು.

ಅಪ್ಪಿ ತಪ್ಪಿ ಏನಾದ್ರು ಕೋರ್ಟು ಕಚೇರಿ ಅಂತ ಬಂದ್ರೆ ಇನ್ನು ಒಳ್ಳೇದೆ ಆಯ್ತು ಸಹಾನುಭೂತಿ ಜಾಸ್ತಿ ಆಗಿ ಇನ್ನು ಒಂದಷ್ಟು ಓಟು ಗಳು ಜಾಸ್ತಿನೇ ಬೀಳ್ತಾವೆ ಅಂದುಕೊಂಡ ಗೌಡ್ರ ಮುಖದಲ್ಲಿ ಮುಗುಳ್ನಗೆ ಬಂತು. ಹಾಗೆ ಜಗಲಿಯಿಂದ ಒಳನಡೆದ ಗೌಡರು ಹಾಸಿಗೆಗೊರಗಿದರು. ಯೋಚನೆ ಮಾಡಿ ಸುಸ್ತಾಗಿದ್ದ ಗೌಡ್ರನ್ನು ನಿದ್ರಾದೇವಿ ಆವರಿಸಿಕೊಂಡಳು. ಗೌಡರ ಕನಸಲ್ಲಿ ಹುಲಿಯೊಂದು ಬಂದು ಗಹ ಗಹಿಸಿ ನಕ್ಕಂತಾಯ್ತು, ಅದರ ಮೂತಿ ಮಾತ್ರ ಮಾದನ ಹಟ್ಟಿಯಲ್ಲಿ ಕಂಡಿದ್ದ ಹುಲಿಯನ್ನೇ ಹೋಲುತ್ತಿತ್ತು. ಹರಕೆಯ ಕುರಿಗೆ ಹಾರ ಹಾಕಿದಂತೆ ಅದರ ಕುತ್ತಿಗೆಯಲ್ಲಿ ಚುನಾವಣೆಯ ಬಿತ್ತಿ ಪತ್ರವೊಂದು ನೇತಾಡುತ್ತಿತ್ತು !!!!!!!!!!!!!!!



ADVT.

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

# ಬಂಟರ ಸಂಘ ಬೆಂಗಳೂರು – ಮಹಿಳಾ ವಿಭಾಗ

ದಿನಾಂಕ 07, ಡಿಸೆಂಬರ್ 2024ರಂದು ಮಧ್ಯಾಹ್ನ ಘಂಟೆ 2.30ರಿಂದ ಸಂಜೆ ಘಂಟೆ 5.00ರವರೆಗೆ ಎಂ.ಆರ್.ಎಸ್. ನಗರದ "ಮೂಲ್ಕಿ ಸುಂದರರಾಮ್ ಶೆಟ್ಟಿ" ಸಭಾಂಗಣದಲ್ಲಿ ಬೆಂಗಳೂರು ಮಹಿಳಾ ವಿಭಾಗದಿಂದ ಆಯೋಜಿಸಿದ "ಕಸದಿಂದ ರಸ" ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಿತು.



ಪ್ರಪ್ರಥಮವಾಗಿ ಕಾರ್ಯಕ್ರಮದ ನಿರೂಪಕಿ ಶ್ರೀಮತಿ ಅನಿತಾ ಶೆಟ್ಟಿಯವರು ವೇದಿಕೆಯ ಮೇಲೆ ವಿರಾಜಿಸಲಿದ್ದ ಗಣ್ಯರನ್ನು ಬರಮಾಡಿಕೊಂಡರು. ಮುಖ್ಯ ಅತಿಥಿಯಾಗಿ ಆಗಮಿಸಿದ ಸಹನಾ ಹೆಗ್ಡೆ, ಬಂಟರ ಸಂಘದ ಮಹಿಳಾ ಉಪಾಧ್ಯಕ್ಷೆ ಶ್ರೀಮತಿ ಕಾಂತಿ ಶೆಟ್ಟಿ, ಜಂಟಿ ಕಾರ್ಯದರ್ಶಿ ಶ್ರೀಮತಿ ಜಯಶ್ರೀ ಸಿ. ರೈ, ಮಹಿಳಾ ವಿಭಾಗದ ಚೇರ್‌ಪರ್ಸನ್ ಶ್ರೀಮತಿ ಯೋಗ್ಯ ಎಲ್. ರೈ ಹಾಗೂ ಮಹಿಳಾ ವಿಭಾಗದ ಸಂಚಾಲಕಿ ಶ್ರೀಮತಿ ಮಲ್ಲಿಕಾ ಕೆ. ಶೆಟ್ಟಿ ಇವರುಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕಾರ್ಯಕ್ರಮವು ಶ್ರೀಮತಿ ಶರಣ್ಯ ಶೆಟ್ಟಿಯವರ ಗಣಪತಿಯ ಪ್ರಾರ್ಥನೆಯೊಂದಿಗೆ ಆರಂಭವಾಯಿತು. ನಂತರ ವೇದಿಕೆಯ ಗಣ್ಯರೊಡಗೂಡಿ ಮಹಿಳಾ ವಿಭಾಗದ ಎಲ್ಲಾ ಸದಸ್ಯರು ಬಂಟ ಗೀತೆಯನ್ನು ಹಾಡಿದರು. ಮಹಿಳಾ ವಿಭಾಗದ ಚೇರ್‌ಪರ್ಸನ್ ಶ್ರೀಮತಿ ಯೋಗ್ಯ ಎಲ್. ರೈಯವರು ವೇದಿಕೆಯಲ್ಲಿ ಉಪಸ್ಥಿತರಿದ್ದ ಗಣ್ಯರು ಹಾಗೂ ನೆರೆದಿದ್ದ ಎಲ್ಲಾ ಸಭಿಕರನ್ನು ಪ್ರೀತಿ ಪೂರ್ವಕವಾಗಿ ಸ್ವಾಗತಿಸಿದರು.

ಮಹಿಳಾ ಉಪಾಧ್ಯಕ್ಷೆ ಶ್ರೀಮತಿ ಕಾಂತಿ ಶೆಟ್ಟಿಯವರು ನೆರೆದಿದ್ದ ಭಗಿನಿಯರನ್ನು ಉದ್ದೇಶಿಸಿ ಮಾತನಾಡುತ್ತಾ, ಹೆಣ್ಣು ಒಂದು ಶಕ್ತಿ ನಾವೆಲ್ಲರೂ ಇನ್ನೂ ಮುಂದಕ್ಕೂ ಹೀಗೆ ಒಗ್ಗಟ್ಟಾಗಿ ಉತ್ತಮ ಕೆಲಸಗಳನ್ನು ಮಾಡೋಣ. ಬಂಟರ ಸಂಘದ ಪ್ರತಿಯೊಂದು ಕಾರ್ಯಕ್ರಮದಲ್ಲೂ ಭಾಗವಹಿಸಿ ಯಶಸ್ವಿಯಾಗಿ ಪರಿಗಣಿಸೋಣ ಎಂದು ನುಡಿದರು. ಜಂಟಿ ಕಾರ್ಯದರ್ಶಿ ಶ್ರೀಮತಿ ಜಯಶ್ರೀ ಸಿ. ರೈಯವರು ಮಾತನಾಡುತ್ತಾ ಬಂಟರ ಸಂಘದ ಕಂಪು ಸುಂದರರಾಮ್ ಶೆಟ್ಟಿ ನಗರದಲ್ಲಿ ಇಂಪಾಗುವಂತೆ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳನ್ನು ತಿಳಿಸಿದರು.

ಶ್ರೀಮತಿ ಅಮಿತಾ ಶೆಟ್ಟಿಯವರು ಅದೃಷ್ಟ ಮಹಿಳೆ ಬಹುಮಾನವನ್ನು ಘೋಷಿಸಿದರು. ಈ ಬಹುಮಾನವನ್ನು ಶ್ರೀಮತಿ ಶ್ವೇತಾರವರು ಪಡೆದುಕೊಂಡರು.



ಮುಖ್ಯ ಅತಿಥಿ ಶ್ರೀಮತಿ ಸಹನಾ ಹೆಗ್ಡೆಯವರ ಪರಿಚಯವನ್ನು ಶ್ರೀಮತಿ ರೇಣುಕಾ ಹೆಗ್ಡೆಯವರು ನಡೆಸಿಕೊಟ್ಟರು. ಮುಖ್ಯ ಅತಿಥಿಯಾಗಿ ಆಗಮಿಸಿದ ಸಹನಾ ಹೆಗ್ಡೆಯವರು ಮಾತನಾಡುತ್ತಾ ನಮ್ಮ ದಿನ ನಿತ್ಯದ ಚಟುವಟಿಕೆಗಳಲ್ಲಿ ನಾವು ಆದಷ್ಟು ರಾಸಾಯನಿಕ ರಹಿತ ಜೀವನವನ್ನು ಹೇಗೆ ನಡೆಸಬಹುದು, ಅಡುಗೆ ಮನೆಯಲ್ಲಿ ಉಪಯೋಗಿಸಿ ಬಿಸಾಡುವ ತರಕಾರಿ ಸಿಪ್ಪೆ ಅಥವಾ ಹಣ್ಣಿನ ಸಿಪ್ಪೆ ಇವುಗಳನ್ನು ಬಳಸಿ ನಮಗೆ ಉಪಯೋಗವಾಗುವಂತಹ ವಸ್ತುಗಳನ್ನು ತಯಾರಿಸಬಹುದು, ಅದರಿಂದ ನಮಗಾಗುವ ಉಪಯೋಗಗಳು ಮುಂತಾದ ವಿಷಯಗಳನ್ನು ಅರ್ಥಗರ್ಭಿತವಾಗಿ ವಿವರಿಸಿದರು. ಈ ತರಹ ಕಸದಿಂದ ರಸವನ್ನು ತೆಗೆಯುವ ಕ್ರಿಯೆಗೆ "ಜೈವಿಕ ಕಿಣ್ವ" ಎಂದು ಹೇಳುತ್ತಾರೆ ಎಂಬುದಾಗಿ ತಿಳಿಸಿದರು. ಅಲ್ಲದೆ ಈ ವಸ್ತುವನ್ನು ತಯಾರಿಸುವ ವಿಧಾನವನ್ನು ವೇದಿಕೆಯಲ್ಲಿ ತೋರಿಸಿಕೊಟ್ಟರು. ಸಭೆಯಲ್ಲಿ ಕೆಲವು ಭಗಿನಿಯರ ಪ್ರಶ್ನೆಗಳಿಗೆ

ವಿಸ್ತಾರವಾದ ಉತ್ತರವನ್ನು ನೀಡಿದರು. ಮಹಿಳೆಯರಿಗೆ ಇದೊಂದು ಉಪಯೋಗಕಾರಿ ಕಾರ್ಯಕ್ರಮವಾಗಿತ್ತು.



ಕಾರ್ಯಕ್ರಮಕ್ಕೆ ಸಹಕಾರವನ್ನು ನೀಡಿದಂತಹ ಶ್ರೀ ಪ್ರದೀಪ್ ಹೆಗ್ಡೆ ಮತ್ತು ಶ್ರೀ ರಮೇಶ್ ಶೆಟ್ಟಿಯವರಿಗೆ ಹಾಗೂ ಸಂಜೆಯ ಉಪಾಹಾರವನ್ನು ನೀಡಿದಂತಹ ಹೋಟೆಲ್ ಸಾಯಿ ಸೂಟ್‌ನ ಶ್ರೀ ಸುರೇಶ್ ಶೆಟ್ಟಿ ಹಾಗೂ ಶ್ರೀ ದಿನೇಶ್ ಶೆಟ್ಟಿಯವರಿಗೆ ಹೃತ್ಪೂರ್ವಕ ಧನ್ಯವಾದಗಳು. ಮಹಿಳಾ ವಿಭಾಗದ ಸದಸ್ಯೆಯಾದ ಶ್ರೀಮತಿ ಅನುರಾಧ ಎ. ಶೆಟ್ಟಿಯವರು ಈ ಕಾರ್ಯಕ್ರಮದ ಸಂಪೂರ್ಣ ಜವಾಬ್ದಾರಿ ವಹಿಸಿಕೊಂಡು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಇವರಿಗೂ ಅಭಿನಂದನೆಗಳು.

ಮುಂದಕ್ಕೆ ಭಗಿನಿಯರೆಲ್ಲ ಸೇರಿಕೊಂಡು "ಹೌಸಿ" ಆಟವನ್ನು ಆಡಿದರು. ಆಟದಲ್ಲಿ ಗೆದ್ದ ಮಹಿಳೆಯರಿಗೆ ಬಹುಮಾನವನ್ನು ವಿತರಿಸಲಾಯಿತು. ಕೊನೆಯದಾಗಿ ಮಹಿಳಾ ವಿಭಾಗದ ಸಂಚಾಲಕಿ ಶ್ರೀಮತಿ ಮಲ್ಲಿಕಾ ಕೆ. ಶೆಟ್ಟಿಯವರು ತನ್ನ ಧನ್ಯವಾದ ಸಮರ್ಪಣೆಯಲ್ಲಿ ಕಾರ್ಯಕ್ರಮಕ್ಕೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕರಿಸಿದ ಹಾಗೂ ಭಾಗವಹಿಸಿ ಕಾರ್ಯಕ್ರಮವನ್ನು ಚಂದಗಾಣಿಸಿಕೊಟ್ಟ ಪ್ರತಿಯೊಬ್ಬರಿಗೂ ಸೊಗಸಾಗಿ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸಿದರು.

**ಮಲ್ಲಿಕಾ ಕೆ. ಶೆಟ್ಟಿ**
ಸಂಚಾಲಕರು, ಮಹಿಳಾ ವಿಭಾಗ

**ಯೋಗ್ಯ ಎಲ್. ರೈ**
ಚೇರ್‌ಪರ್ಸನ್, ಮಹಿಳಾ ವಿಭಾಗ

# Congratulations

Darshvi Rai Triumphs Silver at the 18th Asian Schools Rapid Chess Championships 2024 - G07, Bangkok.

At the 2024 Asian School Chess Championships in Bangkok, young chess prodigy Darshvi Rai made an extraordinary impact by clinching the title in the Under-7 Girls category. At just 7 years old, Darshvi showcased her exceptional talent by securing four silver medals in Standard, Rapid and Blitz formats, making a name for herself in the world of chess.

But it wasn't just her individual accomplishments that set her apart. Darshvi also played a key role in Team India's exceptional performance at the championships.

Her achievements have been nothing short of impressive. Darshvi emerged as the Karnataka State and Karnataka state school Under-7 Girls Champion for 2024.



Her father, Nithin Rai, and her mother, Bhavya Rai, who support their daughter's dream. Her elder brother, Darsh Rai, is also a chess player, and her first chess mentor laying the foundation in the chess domain.

She is the granddaughter of Agari Vasanthi Rai and late Chikkappa Rai and Agari Mohandas Bhandary and Shakunthala Bhandary.

# ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ– II
# ವಿಸ್ಮಯ 2024' ಶಾಲಾ–ಕಾಲೇಜು ವಾರ್ಷಿಕೋತ್ಸವ




ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ II, ಯಲಚಗುಪ್ಪೆ, ತಾವರೆಕೆರೆ ಹೋಬಳಿ, ಬೆಂಗಳೂರು ಇಲ್ಲಿ ದಿನಾಂಕ 15/12/2024, ರವಿವಾರ ಸಂಜೆ 4 ಗಂಟೆಗೆ 'ವಿಸ್ಮಯ 2024'ಎಂಬ ಹೆಸರಿನಲ್ಲಿ ಶಾಲಾ–ಕಾಲೇಜು ಇತಿಹಾಸದಲ್ಲಿ ಮೊಟ್ಟ ಮೊದಲ ಬಾರಿಗೆ ಅದ್ದೂರಿಯಾದ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ವಾರ್ಷಿಕೋತ್ಸವ ಕಾರ್ಯಕ್ರಮಕ್ಕೆ ತುಮಕೂರಿನ ಸಿದ್ಧಾರ್ಥ ವಿದ್ಯಾಸಂಸ್ಥೆಯ ಉಪಕುಲಪತಿಗಳಾದ ಶ್ರೀಯುತ ಬಾಲಕೃಷ್ಣ ಪಿ.ಶೆಟ್ಟಿಯವರು ಆಗಮಿಸಿದ್ದರು. ಬೆಂಗಳೂರಿನ ಬಂಟರ ಸಂಘದ ಅಧ್ಯಕ್ಷರಾದ ಶ್ರೀಯುತ ಸಿ.ಎ.ಅಶೋಕ.ಶೆಟ್ಟಿ ಎಮ್.ಯವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀಯುತ ವಿಜಯ ಶೆಟ್ಟಿ ಹಾಲಾಡಿ ಇವರು ಸಂಯೋಜಕರಾಗಿದ್ದು ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಎಜ್ಜಿಲ್ ಅರಸಿಯವರು ಕಾರ್ಯಕ್ರಮದ ನೇತೃತ್ವವನ್ನು ವಹಿಸಿದ್ದರು.



ಕಾರ್ಯಕ್ರಮವು ವಿಜೃಂಭಣೆಯಿಂದ ಪ್ರಾರ್ಥನಾ ಗೀತೆಯೊಂದಿಗೆ ಪ್ರಾರಂಭವಾಯಿತು. ಸ್ವಾಗತ ಭಾಷಣವನ್ನು ಕಾಲೇಜು ಪ್ರಾಚಾರ್ಯರು ಶ್ರದ್ಧೆಯಿಂದ ನೆರವೇರಿಸಿದರು. ಮುಖ್ಯ ಅತಿಥಿಗಳು ಮತ್ತು ಅಧ್ಯಕ್ಷರು ದೀಪವನ್ನು ಪ್ರಜ್ವಲಿಸಿ ಕಾರ್ಯಕ್ರಮಕ್ಕೆ ಶುಭಾರಂಭ ಮಾಡಿದರು. ಕಾಲೇಜಿನ ಪ್ರಾಂಶುಪಾಲರು ಶಾಲಾ ಕಾಲೇಜುಗಳ ಸಾಧನೆ ಮುಂದಿನ ಯೋಜನೆಗಳು ಮತ್ತು ಕಾರ್ಯಕ್ರಮಗಳ ಬಗ್ಗೆ ವಾರ್ಷಿಕ ವರದಿಯನ್ನು ನೀಡಿದರು. ಶಾಲೆಯ ಸಂಚಾಲಕರಾದ ಶ್ರೀಯುತ ವಿಜಯ ಶೆಟ್ಟಿ ಹಾಲಾಡಿ ಇವರು ಮಾತನಾಡಿ ವಿದ್ಯಾರ್ಥಿಗಳ ಉನ್ನತ ಭವಿಷ್ಯದ ಕುರಿತು ಪ್ರೇರಣಾದಾಯಕ ಸಲಹೆಗಳನ್ನು ನೀಡಿದರು. ಮುಖ್ಯ ಅತಿಥಿಗಳಾಗಿದ್ದ ಶ್ರೀಯುತ ಬಾಲಕೃಷ್ಣ ಪಿ.ಶೆಟ್ಟಿ ಅವರು ವಿದ್ಯಾರ್ಥಿಗಳ ಶ್ರಮ ಶೀಲತೆ ಮತ್ತು ಧೈರ್ಯದ ಮಹತ್ವವನ್ನು ಬೋಧಿಸಿದರು. 2023–24 ನೇ ಶೈಕ್ಷಣಿಕ ಸಾಲಿನಲ್ಲಿ ದ್ವಿತೀಯ ಪಿ.ಯು.ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ಸುಮಾರು 64 ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಅವರ ಸಾಧನೆಗಳನ್ನು ಗುರುತಿಸಲಾಯಿತು. ವಿದ್ಯಾರ್ಥಿಗಳ ಸಾಂಸ್ಕೃತಿಕ ಪ್ರದರ್ಶನವು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ನೃತ್ಯ, ಹಾಡು, ನಾಟಕ, ಮಲ್ಲಕಂಬ, ಹಗ್ಗ ಏರಾಟ, ಮತ್ತಿತರ ಕಲಾತ್ಮಕ ಪ್ರದರ್ಶನಗಳು ಮನರಂಜನೆಯನ್ನು ನೀಡಿದವು.



ಒಟ್ಟಾರೆಯಾಗಿ 'ವಿಸ್ಮಯ 2024' ವಾರ್ಷಿಕೋತ್ಸವ ಕಾರ್ಯಕ್ರಮವುವಿಸ್ಮಯಕಾರಿಯೇ ಆಗಿದ್ದು ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಸ್ಮರಣೀಯ ಅನುಭವವನ್ನು ನೀಡಿದ್ದು ಉತ್ಸಾಹ ಭರಿತವಾಗಿ ನೆರವೇರಿತು.



ಬಂಟರ ಸಂಘ ಬೆಂಗಳೂರು
BUNTS' SANGHA BANGALORE

# ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ 2024-26



ಸುಳ್ಯ ತಾಲೂಕು ಬಂಟರ ಯಾನೆ ನಾಡವರ ಸಂಘ (ರಿ) ಹಾಗೂ ಬೆಂಗಳೂರು ಬಂಟರ ಸಂಘದ ಸಹಯೋಗದೊಂದಿಗೆ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ವಿದ್ಯಾರ್ಥಿ ವೇತನ ವಿತರಣೆ, ವಾರ್ಷಿಕ ಮಹಾಸಭೆ ಕಾರ್ಯಕ್ರಮವನ್ನು ದಿನಾಂಕ 29.12.2024, ಭಾನುವಾರದಂದು ಆಶಾ ಪ್ರಕಾಶ್ ಶೆಟ್ಟಿ ಬಂಟರ ಭವನ ಸುಳ್ಯದಲ್ಲಿ ಆಯೋಜಿಸಲಾಗಿತ್ತು. ಬೆಂಗಳೂರು ಬಂಟರ ಸಂಘದ ವತಿಯಿಂದ ಪ್ರತಿಭಾ ಪುರಸ್ಕಾರ ವಿತರಣೆಗೆ ರೂ. 50,000/- ವನ್ನು ನೀಡಲಾಗಿದೆ. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಬೆಂಗಳೂರು ಬಂಟರ ಸಂಘದ ಸಂಘದ ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿಯ ಚೇರ್‌ಪರ್ಸನ್ ಶ್ರೀ ಉಮೇಶ್ ಕುಮಾರ್ ಶೆಟ್ಟಿಯವರು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀಮತಿ ಶೋಭಾ ಶೇಖರವರು ಭಾಗವಹಿಸಿದ್ದರು. ಶ್ರೀಮತಿ ಮಮತಾ ಪಿ. ಶೆಟ್ಟಿ, ಶ್ರೀಮತಿ ಮಲ್ಲಿಕಾ ಪಕ್ಕಳ, ಸುಳ್ಯ ತಾಲೂಕು ಬಂಟರ ಯಾನೆ ನಾಡವರ ಸಂಘದ ಅಧ್ಯಕ್ಷರಾದ ಶ್ರೀ ಎನ್. ಜಯಪ್ರಕಾಶ್ ರೈ ಹಾಗೂ ಇನ್ನಿತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಅಧ್ಯಕ್ಷರಾದ ಶ್ರೀ ಎನ್. ಜಯಪ್ರಕಾಶ್ ರೈಯವರು ಮಾತನಾಡಿ ಸುಳ್ಯ ಬಂಟರ ಸಂಘಕ್ಕೆ ಬೆಂಗಳೂರು ಬಂಟರ ಸಂಘದ ಕೊಡುಗೆಯನ್ನು ಶ್ಲಾಘಿಸಿದರು.

**ಸುಧಾಕರ ಶೆಟ್ಟಿ ಹಟ್ಟಿಯಂಗಡಿ**
ಸಂಚಾಲಕರು,
ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ

**ಉಮೇಶ್ ಕುಮಾರ್ ಶೆಟ್ಟಿ**
ಚೇರ್‌ಪರ್ಸನ್,
ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ


ಸದಸ್ಯ ಬಾಂಧವರೆಲ್ಲರಿಗೂ 2025ರ
ಹೊಸ ವರ್ಷ, ಮಕರ ಸಂಕ್ರಾಂತಿ ಹಾಗೂ
ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದ
ಬೆಳ್ಳಿ ಹಬ್ಬದ ಸಂಭ್ರಮಕ್ಕೆ
ಶುಭಕೋರುವವರು



ಶ್ರೀ ಸುನೀಲ್ ಕುಮಾರ್ ಶೆಟ್ಟಿ ಜೆ
ಚೇರ್‌ಪರ್ಸನ್, ಖರೀದಿ ಸಮಿತಿ,
ಬಂಟರ ಸಂಘ ಬೆಂಗಳೂರು

ADVT.

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

# BUNTS SANGHA R.N.S. VIDYANIKETAN
## Report on Pre-primary Annual Day-2024-25

Bunts' Sangha RNS Vidyaniketan's Preprimary Wing celebrated its Annual Day, VIVANTA, on Saturday, 21st December 2024. The event was graced by Mrs. Vidya S. Shetty, Pro Vice Chancellor of Presidency University, as the Chief Guest.




Dignitaries present included CA Ashok Shetty, President of Bunts' Sangha Bengaluru; Shri Vijayakumar Shetty Halady, Honorary Secretary of Bunts' Sangha; Mr. Santhosh Shetty, Vice President of Bunts' Sangha; Mrs. Usha Santosh, Principal; and Mrs. Kalpana Ram, Vice Principal.



In her address, the Chief Guest urged parents to understand their children and guide them in the right direction. She emphasized the importance of creating a nurturing environment at home to help children grow into responsible citizens. She also highlighted the pivotal role of educational institutions in shaping young minds.

The Principal, Mrs. Usha Santhosh, presented the annual report, highlighting the events conducted during the 2024-25 academic year. The report served as a testament to the quality of education provided by the institution.




Additionally, the other dignitaries present addressed the parents, sharing their insights and thoughts on the occasion.

The event featured enchanting and vibrant cultural performances by the tiny tots, showcasing the rich culture of our nation. The dedication and hard work of the Preprimary Wing staff were evident in the remarkable performances.

It was truly a day filled with joy, celebration, and unforgettable memories.

# ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ ರಜತ ಮಹೋತ್ಸವ ಸಮಾರಂಭ



ಎ. ಗಿರೀಶ್ ರೈ

**ಬೆಂಗಳೂರು ಬಂಟರ ಸಂಘದ ಅಧಿದೇವತೆ ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ ಜನವರಿ 19, 2000ರಲ್ಲಿ ಪ್ರತಿಷ್ಠಾಪನೆಗೊಂಡಿದ್ದು, ಇದೇ ಬರುವ 19, 2025ರಂದು ಇಪ್ಪತ್ತೈದು ವರ್ಷವಾಗುತ್ತದೆ. ಇದರ ರಜತ ಮಹೋತ್ಸವವನ್ನು 19ರಂದು ವಿಜೃಂಭಣೆಯಿಂದ ಆಚರಿಸಲು ತಯಾರಿ ನಡೆಯುತ್ತಿದೆ.**

ರಾಜ್ಯಗಳ ಪುನರ್‌ವಿಂಗಡಣೆಯೊಂದಿಗೆ ಮೈಸೂರು ರಾಜ್ಯ 1956ರಲ್ಲಿ ಉದಯವಾಯಿತು. ಇದರೊಂದಿಗೆ ದಕ್ಷಿಣಕನ್ನಡ ಜಿಲ್ಲೆ, ಮದ್ರಾಸ್ ಹಾಗೂ ಹೈದರಾಬಾದ್‌ನಿಂದ ಬೆಂಗಳೂರಿಗೆ ಹೆಚ್ಚು ಹೆಚ್ಚು ಜನರು ಬರುವಂತಾಯಿತು. ಇವರಲ್ಲಿ ಅಧಿಕಾರಿಗಳು, ನ್ಯಾಯವಾದಿಗಳು ಹಾಗೂ ವಿವಿಧ ಕೈಗಾರಿಕೆಗಳನ್ನು ಪ್ರಾರಂಭಿಸಲು ಬರುವವರು ಸೇರಿದ್ದರು. ಇಂತಹ ಜನರಿಗೆ ಸಹಾಯ, ಸಲಹೆ ನೀಡುವ ಸದುದ್ದೇಶದಿಂದ ಬಂಟರ ಸಂಘವನ್ನು ಪ್ರಾರಂಭಿಸಬೇಕೆಂದು ಇಲ್ಲಿ ಮೊದಲೇ ನೆಲೆಸಿದ್ದ ಡಾ। ಕೆ.ಕೆ. ಹೆಗ್ಡೆ, ಸಿ.ಎಲ್ ನಾಯಕ್, ಡಾ। ನಾಗಪ್ಪ ಆಳ್ವ ಮೊದಲಾದ ಮುಖಂಡರು ಬಂಟರ ಸಂಘವನ್ನು 1957–58ರಲ್ಲಿ 31 ಸದಸ್ಯರ ನೊಂದಣೆಯೊಂದಿಗೆ ಸಂಘ ಪ್ರಾರಂಭಗೊಂಡಿತ್ತು. ಇದಾದ ನಂತರ ಸಂಘ ಬೆಳೆದು ಸದಸ್ಯರ ಸಂಖ್ಯೆ ಹೆಚ್ಚಾಗುತ್ತಾ, ಸಂಘಕ್ಕೆ ತನ್ನದೇ ಸ್ವಂತ ಕಟ್ಟಡ ನಿರ್ಮಾಣಕ್ಕೆ ಜಾಗ ಹುಡುಕಲಾಯಿತು. ಇಂತಹ ಸನ್ನಿವೇಶದಲ್ಲಿ ಪ್ರಸಕ್ತ ಜಾಗವನ್ನು ಮುಂಬಯಿ ಉದ್ಯಮಿ ಶ್ರೀ ತಿಮ್ಮಪ್ಪ ಭಂಡಾರಿಯವರು ಖರೀದಿಸಿದ್ದು, ಇಲ್ಲಿ ಅವರ ಉದ್ದಿಮೆಯನ್ನು ನಡೆಸಲು ಉದ್ದೇಶಿಸಿದ್ದರು. ಈ ಜಾಗ ಅವರ ಉದ್ದಿಮೆಗೆ ಸರಿಯಾಗಲಾರದೆಂದು ಅವರು ಬೇರೆ ಜಾಗ ಹುಡುಕುತ್ತಿದ್ದರು. ಇದನ್ನು ತಿಳಿದ ಕೆ.ಎಸ್ ಹೆಗ್ಡೆ ಸುಪ್ರೀಮ್ ಕೋರ್ಟ್ ನಿವೃತ್ತ ನ್ಯಾಯಾಧೀಶರು, ಎಂ. ಸುಂದರರಾಮ ಶೆಟ್ಟಿ ಅಧ್ಯಕ್ಷರು ವಿಜಯಬ್ಯಾಂಕ್ ಹಾಗೂ ಕೆದಂಬಾಡಿ ಜಗನ್ನಾಥ ಶೆಟ್ಟಿ, ಅಂದಿನ ನ್ಯಾಯವಾದಿ ಮಾನ್ಯ ತಿಮ್ಮಪ್ಪ ಭಂಡಾರಿಯವರನ್ನು ಭೇಟಿ ಮಾಡಿ ವಿಜಯನಗರದ ಈ ಜಾಗವನ್ನು ಬೆಂಗಳೂರು ಬಂಟರ ಸಂಘಕ್ಕೆ ದಾನವಾಗಿ ನೀಡಬೇಕೆಂದು ವಿನಂತಿಸಿಕೊಂಡರು. ಇದಕ್ಕೆ ತಿಮ್ಮಪ್ಪ ಭಂಡಾರಿಯವರು ಬಂಟರ ಸಂಘ ನಿರ್ಮಿಸಲಿರುವ ಸಭಾಭವನಕ್ಕೆ ಅವರ ಮಡದಿ ಶ್ರೀಮತಿ ರಾಧಾಬಾಯಿಯವರ ಹೆಸರಿಡಬೇಕೆಂಬ ಶರತ್ತಿನೊಂದಿಗೆ ಒಪ್ಪಿ ಗಿಫ್ಟ್ ಡೀಡನ್ನು 29.03.1975ರಲ್ಲಿ ಅಂದಿನ ಅಧ್ಯಕ್ಷರಾಗಿದ್ದ ಇರ್ಮಾಡಿ ಆನಂದ ಶೆಟ್ಟಿಯವರಿಗೆ ನೀಡಿದ್ದರು. ಶ್ರೀ ಶ್ರೀನಿವಾಸ ಆಳ್ವರವರು ಮತ್ತು ಸಂಗಡಿಗರ ಮಹತ್ಸಾಧನೆಯಿಂದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನ 26.01.1993ರಲ್ಲಿ ಉದ್ಘಾಟನೆಗೊಂಡಿತು.

ಬಂಟರ ಸಂಘ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನ ಸುಸಜ್ಜಿತ, ಹವಾನಿಯಂತ್ರಿತ ಕನ್‌ವೆನ್‌ಶನ್ ಹಾಲ್ ಆಗಿದ್ದು ಜನಮನ್ನಣೆ ಗಳಿಸಿದೆ. ಈ ಹಾಲ್‌ನಲ್ಲಿ ಮದುವೆ ಇತರ ಅನೇಕ ಕಾರ್ಯಕ್ರಮಗಳು ನಡೆಯುತ್ತಿವೆ. ಇಲ್ಲಿ ಅಕ್ಕಪಕ್ಕದ ಮನೆಗಳಲ್ಲಿ ಅಂದು ವಾಸಿಸುತ್ತಿದ್ದ ಸಂಘದ ಸದಸ್ಯರು ಸಾಯಂಕಾಲದಲ್ಲಿ ಪ್ರಾರ್ಥನೆ, ಭಜನೆ ಮಾಡಲು ಬರುತ್ತಿದ್ದರು. ಶ್ರೀಮತಿ ವೇದಾವತಿ ಎಸ್. ಶೆಟ್ಟಿ, ಶ್ರೀಮತಿ ಹೇಮಲತಾ ವಿ. ಶೆಟ್ಟಿ, ಶ್ರೀಮತಿ ಸುಜಯ ಜೆ. ಶೆಟ್ಟಿ ಶ್ರೀಮತಿ ಸರ್ವಾಣಿ ಜಿ. ರೈ, ಶ್ರೀಮತಿ ಮೀರಾ ಕೆ. ಶೆಟ್ಟಿ, ಶ್ರೀಮತಿ ವಿನೋದ, ಶಾಂತಕ್ಕ ಮತ್ತಿತರರು ಇದರಲ್ಲಿ ಭಾಗವಹಿಸುತ್ತಿದ್ದರು. ಭಜನೆಯಲ್ಲಿ ಪುಟ್ಟ ಮಕ್ಕಳು ಸಹ ಪಾಲುಗೊಳ್ಳುತ್ತಿದ್ದರು. ಇಲ್ಲಿ ಮುಂದೊಂದು ದಿನ ದೇವಸ್ಥಾನ ಪ್ರತಿಷ್ಠಾಪನೆಯಾಗಲೆಂದು ಅವರೆಲ್ಲರು ಆಶಿಸುತ್ತಿದ್ದರು. ಸಂಘದ ಈ ಭವನದಲ್ಲಿ ಮದುವೆಗಳು ನೆರವೇರುತ್ತಿದ್ದು, ಇಲ್ಲಿ ಒಂದು ಮಂದಿರದ ಅಗತ್ಯವಿತ್ತು. ಇಂತಹ ಸನ್ನಿವೇಶದಲ್ಲಿ ಡಾ। ಎಂ. ತಿಮ್ಮಪ್ಪ ರೈಯವರು ಅಧ್ಯಕ್ಷರಾಗಿದ್ದ 1997–99ರ ಅವಧಿಯಲ್ಲಿ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದ ದಿ. ಹರಿಪ್ರಸಾದ್ ಶೆಟ್ಟಿ, ಶ್ರೀ ಕೆ.ಟಿ. ಸುಧಾಕರ ರೈ ಮತ್ತು ಶ್ರೀ ಡಿ. ಚಂದ್ರಹಾಸ ರೈಯವರು ಮಂಗಳೂರಿನ ಮಾತೃ ಸಂಸ್ಥೆಯಲ್ಲಿ ನಡೆದಿದ್ದ ಒಂದು ಕಾರ್ಯಕ್ರಮವನ್ನು ಮುಗಿಸಿ ಮರಳಿ ಬರುತ್ತಿರುವಾಗ ಈ ಅವಧಿಯಲ್ಲೇ ಮಂದಿರ ಕಟ್ಟಬೇಕೆಂದು, ಅದಕ್ಕೆ ಅಗತ್ಯವಿರುವ ಸಹಾಯಧನ ಸಂಗ್ರಹಿಸಬೇಕೆಂದೂ ತಮ್ಮ ದೇಣಿಗೆಯಾಗಿ ನೀಡಲಿರುವ ಮೊತ್ತವನ್ನು ತೆಗೆದಿಟ್ಟಿದ್ದರು. ಅಂತೆಯೇ ನಾನು ಕೂಡಾ ಮೊತ್ತವನ್ನು ನೀಡಿದ್ದೆ. ಈ ಮಂದಿರದ ಕಟ್ಟಡ ಕೆಲಸವನ್ನು ಸದಸ್ಯರಾಗಿದ್ದ ಜಯಕರ ಶೆಟ್ಟಿಯವರಿಗೆ ಒಪ್ಪಿಸಲಾಗಿತ್ತು. ಸ್ಥಳಾವಕಾಶದ ಕಾರಣ ಇದಕ್ಕೆ ಇಂಜಿನಿಯರ್ ವಿಶಿಷ್ಟ ರೀತಿಯ ನಕ್ಷೆಯನ್ನು

ಆರ್ಕಿಟೆಕ್ಟ್ ಅನೂಪ್ ನಾಯಕ್‌ವರು ಮಾಡಿಕೊಟ್ಟಿದ್ದರು. ನಾನು ತಿಳಿದಂತೆ ಸಂಘದ ಅಧಿಕ ಸದಸ್ಯರು ಈ ಕಾರ್ಯಕ್ಕೆ ತಮ್ಮ ಶಕ್ತಿಯಾನುಸಾರ ನೀಡಿದ್ದರು.

ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ ನಿರ್ಮಾಣದ ಕಾರ್ಯ ಮುಂದುವರಿಯುತ್ತಿದ್ದಂತೆ ಮಾಜಿ ಅಧ್ಯಕ್ಷರಾದ ದಿ. ಡಿ.ಕೆ ಚೌಟ, ದಿ. ಐ.ಎಂ. ಜಯರಾಮ ಶೆಟ್ಟಿ, ಶ್ರೀ ಭಗವಾನ್‌ದಾಸ್ ರೈ ಮತ್ತು ಶ್ರೀ ಹರೀಶ್ ಕುಮಾರ್ ಶೆಟ್ಟಿಯವರೆಲ್ಲರೂ ಮೊತ್ತ ನೀಡಿದ್ದರು. ಅಂತೆಯೇ ದಿ. ಬಿ. ಸಂಜೀವ ಶೆಟ್ಟಿ ಇತರರು ಮಂದಿರಕ್ಕೆ ಅಗತ್ಯವಿರುವ ಇತರ ಪರಿಕರಗಳನ್ನು ನೀಡಿದ್ದರು.

ಕುಣಿಗಲ್ ಸಮೀಪದ ಹೆಬ್ಬೂರು ಕೋದಂಡಾಶ್ರಮದ ಶ್ರೀ ಶ್ರೀ ಶ್ರೀ ನಾರಾಯಣಾಶ್ರಮ ಗುರುಗಳು ಹೋಮ ಹವನ ಮಾಡಿ ಪಾಣಿಪೀಠ ಇಡುವ ಹೊತ್ತಿನಲ್ಲೇ ಗುರುಗಳನ್ನು ಹುಡುಕಿಕೊಂಡು ಕೊಳ್ಳೆಗಾಲ–ಕೋಲಾರ ಸಮೀಪ ಕೆಲವರು ಒಂದು ಶ್ರೀ ಚಕ್ರವನ್ನು ತಂದಿದ್ದು, ಅದನ್ನು ಹೆಬ್ಬೂರು ಮಠಕ್ಕೆ ನೀಡಲಿದ್ದರು. ಶ್ರೀ ಗುರುಗಳು ಬಂಟರ ಸಂಘಕ್ಕೆ ಪ್ರತಿಷ್ಠಾಪನೆಗೆ ತೆರಳಿದ್ದಾರೆಂದು ಮಠದಲ್ಲಿ ತಿಳಿಸಿದ ಕಾರಣ ಬಂದಿದ್ದರು. ಇದು ಇಲ್ಲಿಗೆ ಪರಮಾತ್ಮನ ಇಚ್ಛೆ ದೇವರು ಎಣಿಸಿದಂತೆಯೇ ಆಗಲಿ ಎಂದು ನುಡಿದ ಸ್ವಾಮಿಗಳು ಈ ಶಕ್ತಿಯುತ ಶ್ರೀ ಚಕ್ರವನ್ನು ಪಾಣಿಪೀಠದ ಅಡಿಯಲ್ಲಿ ಇಡಲಾಯಿತು. ಈ ಶ್ರೀ ಚಕ್ರ ಅತ್ಯಂತ ಶಕ್ತಿಶಾಲಿಯಾಗಿದೆ ಎಂದು ಗುರುಗಳು ಅಭಿಪ್ರಾಯ ಪಟ್ಟಿದ್ದರು.

ದಿನಾಂಕ 19.01.2000ರಂದು ಶುಭಗಳಿಗೆಯಲ್ಲಿ ಗುರುಗಳು ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ ಪ್ರತಿಷ್ಠಾಪನೆಯನ್ನು ವಿಧಿವತ್ತಾಗಿ ನೆರವೇರಿಸಿದರು ಶ್ರೀ ಸತೀಶ ಅಡಿಗರವರು ಮಂದಿರದ ಪ್ರತಿಸ್ಥಾಪನೆ ಆದ ಪ್ರಾರಂಭದಿಂದ ಸುಮಾರು ಎಂಟು ವರ್ಷ ಒಂಭತ್ತು ತಿಂಗಳು ಮಂದಿರದ ಅರ್ಚಕರಾಗಿ ಸೇವೆ ಸಲ್ಲಿಸಿದ್ದರು. ಮುಂಡಾಲಗುತ್ತು ಡಾ. ತಿಮ್ಮಪ್ಪ ರೈಯವರ ಅಧ್ಯಕ್ಷತೆಯಲ್ಲಿ ಈ ಪ್ರಾರ್ಥನಾ ಮಂದಿರದ ಪ್ರತಿಷ್ಠಾಪನೆ ನೆರವೇರಿದ್ದು ಒಂದು ಸಾಧನೆ. ಜನವರಿ 2000ದಿಂದ ಈ ತನಕ ಕಾರ್ಯವೆಸಗಿರುವ ಎಲ್ಲಾ ಅಧ್ಯಕ್ಷರು, ಉಪಾಧ್ಯಕ್ಷರು, ಗೌರವ ಕಾರ್ಯದರ್ಶಿಗಳು, ಇತರ ಪದಾಧಿಕಾರಿಗಳು ಹಾಗೂ ಪ್ರಾರ್ಥನಾ ಮಂದಿರದ ಚೇರ್‌ಪರ್ಸನ್ ಎಲ್ಲರೂ ಅತ್ಯಂತ ಶ್ರದ್ಧಾ, ಭಕ್ತಿ ಮತ್ತು ಸೇವಾಮನೋಭಾವದಿಂದ ಕೆಲಸ ನಿರ್ವಹಿಸಿದ್ದಾರೆ. ಇಂದಿನ ಅವಧಿಯ ಚೇರ್‌ಪರ್ಸನ್ ಶ್ರೀಮತಿ ಶೋಭಾ ಎನ್. ಶೇಖರವರು ಅವರ ತಂಡ ಆಸಕ್ತಿ ವಹಿಸಿ ಈ ಸಮಾರಂಭವನ್ನು ಆಯೋಜಿಸಿದ್ದಾರೆ. ಸಂಘದ ಪ್ರತೀ ಸದಸ್ಯರ **ಶಾಶ್ವತ ಪೂಜೆ** ಮಾಡುವಂತೆ ಎಲ್ಲಾ ಸದಸ್ಯರನ್ನು ಪ್ರೇರೆಪಿಸಿದ್ದಾರೆ ಹಾಗೂ ಪ್ರಾರ್ಥನಾ ಮಂದಿರ ಸಮಿತಿಯ ವತಿಯಿಂದ ಸಂಘದ ಆವರಣದಲ್ಲಿ **ಉಚಿತ ಭಜನಾ ತರಗತಿಯನ್ನು** ಪ್ರಾರಂಭಿಸಿದ್ದು, ಸುಮಾರು ನೂರಕ್ಕೂ ಅಧಿಕ ಮಕ್ಕಳು ತರಬೇತಿ ಪಡೆಯುತ್ತಿದ್ದಾರೆ.

**ಶ್ರೀ ವರಸಿದ್ಧಿ ವಿನಾಯಕನ ಕೃಪೆ ಎಲ್ಲಾ ಸದಸ್ಯರು ಮತ್ತು ಕುಟುಂಬದವರ ಮೇಲಿರಲೆಂದು ಪ್ರಾರ್ಥನೆ. ಸಂಘದ ಸದಸ್ಯರೆಲ್ಲರೂ ಈ ಅಪೂರ್ವದ ರಜತ ಮಹೋತ್ಸವ ಸಮಾರಂಭದಲ್ಲಿ ಭಾಗವಹಿಸಬೇಕೆಂದು** ವಿನಮ್ರ ಮನವಿ.

